# ಚಿಂತನೆಗೆ ಹಚ್ಚಿದ ತೀರ್ಪು

**ಲಿವ್ ಇನ್ ಸಂಬಂಧ ಅಧಿಕೃತ ವಿವಾಹಕ್ಕೆ ಸರಿಸಮಾನವಲ್ಲ ಎನ್ನುವುದು ಸಮಾಜದಲ್ಲಿ ಬಹುತೇಕರ ಅಭಿಪ್ರಾಯ. ಆದರೆ ಇಂತಹ ಹೆಣ್ಣುಮಕ್ಕಳಿಗೆ ಕಾನೂನಿನ ರಕ್ಷಣೆ ಸಿಗಬೇಕು ಎನ್ನುವ ಸುಪ್ರೀಕೋರ್ಟ್ ಅಭಿಪ್ರಾಯ ಸ್ವಾಗತಾರ್ಹ.**

ವಿವಾಹಿತನೊಬ್ಬನ ಜತೆ ಅವಿವಾಹಿತ ಮಹಿಳೆಯೊಬ್ಬಳು ಕೂಡಿಕೆ (ಲಿವ್ ಇನ್) ಸಂಬಂಧ ಇಟ್ಟುಕೊಂಡರೆ, ಆಕೆ ಆ ಪುರುಷನಿಂದ ಮಾಶಾಸನಕ್ಕೆ ಅರ್ಹಳಾಗುತ್ತಾಳೆಯೆ... ಎನ್ನುವ ಪ್ರಶ್ನೆಗೆ ಸುಪ್ರೀಂಕೋರ್ಟ್ ಗಂಭೀರ ಉತ್ತರವೊಂದನ್ನು ನೀಡಿದೆ. 'ವಿವಾಹಿತ ಪುರುಷನ ಜತೆಗೆ ಲಿವ್ ಇನ್ ಸಂಬಂಧ ಇಟ್ಟುಕೊಳ್ಳುವ ಅವಿವಾಹಿತ ಮಹಿಳೆಗೆ ಮತ್ತು ಆಕೆಗೆ ಹುಟ್ಟಿದ ಮಕ್ಕಳಿಗೆ ಈಗಿರುವ ಕೌಟುಂಬಿಕ ಹಿಂಸೆ ತಡೆಯ ಕಾನೂನಿನಡಿ ಯಾವುದೇ ರಕ್ಷಣೆ ಇಲ್ಲ; ಆತನಿಂದ ಮಾಸಾಶನ ಪಡೆಯುವ ಅವಕಾಶವೂ ಇಲ್ಲ. ಆದರೆ ಆಕೆಗೆ ರಕ್ಷಣೆ ಒದಗಿಸಲು ಈ ಕಾನೂನಿಗೆ ತಿದ್ದುಪಡಿ ತರಬೇಕು ಅಥವಾ ಸಂಸತ್ತು ಚರ್ಚಿಸಿ ಹೊಸ ಕಾನೂನನ್ನು ತರಬೇಕು' ಎಂದು ಸುಪ್ರೀಂಕೋರ್ಟ್ ಸೂಚಿಸಿದೆ.

ಸುಪ್ರೀಂಕೋರ್ಟ್ ಮುಂದೆ ಚರ್ಚೆಗೆ ಬಂದ ಈ ಪ್ರಕರಣ ಕರ್ನಾಟಕದ್ದೇ ಎನ್ನುವುದು ಕುತೂಹಲಕರ. 15 ವರ್ಷಗಳ ಕಾಲ ಮಹಿಳೆಯೊಬ್ಬಳು ವಿವಾಹಿತ ಪುರುಷನೊಬ್ಬನ ಜತೆಗೆ ವಾಸಿಸಿದ್ದು ಆಕೆಗೆ ಈ ಸಂಬಂಧದಿಂದ ಒಂದು ಮಗುವೂ ಆಗಿತ್ತು. ಇತ್ತೀಚೆಗೆ ಆತ ತನ್ನನ್ನು ನಿರ್ಲಕ್ಷ್ಯಿಸಿರುವುದನ್ನು ಪ್ರಶ್ನಿಸಿ ತನ್ನ ಹಕ್ಕುಗಳನ್ನು ಸ್ಥಾಪಿಸಲು ಆಕೆ ಜಿಲ್ಲಾ ನ್ಯಾಯಾಲಯದ ಮೊರೆ ಹೊಕ್ಕಿದ್ದಳು. ಆಕೆಗೆ ಹೆಂಡತಿಗೆ ಇರುವಷ್ಟೇ ಹಕ್ಕುಗಳಿವೆ ಎಂದು ಹೇಳಿದ ನ್ಯಾಯಾಲಯ, ಪ್ರತಿ ತಿಂಗಳೂ ಜೀವನ ನಿರ್ವಹಣೆಗೆ ಇಂತಿಷ್ಟು ಹಣ ನೀಡಬೇಕೆಂದೂ ಸೂಚಿಸಿತ್ತು. ಆದರೆ ಆತ ಮೇಲ್ಮನವಿ ಸಲ್ಲಿಸಿದ ಬಳಿಕ ಹೈಕೋರ್ಟ್ ಆ ತೀರ್ಪನ್ನು ರದ್ದುಗೊಳಿಸಿತ್ತು. ಪ್ರಕರಣ ಸುಪ್ರೀಂಕೋರ್ಟ್ ಮೆಟ್ಟಿಲು ಹತ್ತಿದಾಗ, ಇಬ್ಬರು ನ್ಯಾಯಾಧೀಶರ ಪೀಠವು ವಿಚಾರಣೆ ನಡೆಸಿ ಹೈಕೋರ್ಟ್ ತೀರ್ಪನ್ನೇ ಎತ್ತಿ ಹಿಡಿದಿದೆ. ಜತೆಗೆ ಈ ರೀತಿಯ ಲಿವ್ ಇನ್ ಸಂಬಂಧಗಳು ಉಂಟು ಮಾಡುತ್ತಿರುವ ಸಾಮಾಜಿಕ ಕ್ಷೋಬೆಗಳತ್ತ ಸರಕಾರದ ಗಮನವನ್ನೂ ಸೆಳೆದಿದೆ.

ಬಹುತೇಕ ಲಿವ್ ಇನ್ ಸಂಬಂಧಗಳಲ್ಲಿ ಅನ್ಯಾಯಕ್ಕೆ ಒಳಗಾಗುವುದು ಮಹಿಳೆಯೇ. ಲಿವ್ ಇನ್ ಸಂಬಂಧ ಮುರಿದುಬಿದ್ದರೆ ಆರ್ಥಿಕವಾಗಿ ನಷ್ಟಕ್ಕೆ ಮತ್ತು ಸಾಮಾಜಿಕವಾಗಿ ದೂಷಣೆಗೆ ಗುರಿಯಾಗುವುದೂ ಮಹಿಳೆಯೇ. ಲಿವ್ ಇನ್ ಸಂಬಂಧ ಅಧಿಕೃತ ವಿವಾಹಕ್ಕೆ ಸರಿಸಮಾನವಲ್ಲ ಎನ್ನುವುದು ಸಮಾಜದಲ್ಲಿ ಬಹುತೇಕರ ಅಭಿಪ್ರಾಯ. ಆದರೆ ಇಂತಹ ಹೆಣ್ಣುಮಕ್ಕಳಿಗೆ ಕಾನೂನಿನ ರಕ್ಷಣೆ ಸಿಗಬೇಕು ಎನ್ನುವ ಸುಪ್ರೀಂಕೋರ್ಟ್ ಅಭಿಪ್ರಾಯ ಸ್ವಾಗತಾರ್ಹ. ಹೊಸ ಕಾನೂನು ಬಂದರೆ, ಮದುವೆಯಾಗಿದ್ದೂ ಇನ್ನೊಬ್ಬ ಹೆಣ್ಣಿನ ಜತೆಗೆ ಕೂಡಿಕೆ ಸಂಬಂಧ ಸ್ಥಾಪಿಸುವ ಪುರುಷ ಬೇಜವಾಬ್ದಾರಿಯಿಂದ ವರ್ತಿಸುವುದು ತಪ್ಪಬಹುದು. ಜತೆಗೆ ಈ ಸಂಬಂಧದಿಂದ ಹುಟ್ಟುವ ಮಕ್ಕಳು ಎದುರಿಸುವ ಹಲವು ಸಾಮಾಜಿಕ ಸಮಸ್ಯೆಗಳೂ ಇಲ್ಲವಾಗುತ್ತವೆ. ಆದರೆ ಈ ರೀತಿಯ ಕಾನೂನಿನಿಂದಾಗಿ ಮದುವೆಗೂ ಮುಂಚಿನ ಲೈಂಗಿಕ ಸಂಪರ್ಕಕ್ಕೆ ಅಧಿಕೃತ ಮಾನ್ಯತೆ ಕೊಟ್ಟಂತೆ ಆಗುವುದಿಲ್ಲವೆ.. ಎನ್ನುವ ಪ್ರಶ್ನೆಯೂ ಉದ್ಭವಿಸಿದೆ. 'ತಾನು ಲಿವ್ ಇನ್ ಸಂಬಂಧ ಹೊಂದುವ ವ್ಯಕ್ತಿಗೆ ಮದುವೆ ಆಗಿದೆ ಎನ್ನುವುದು ಆ ಮಹಿಳೆಗೆ ಮೊದಲೇ ಗೊತ್ತಿದ್ದರೆ ಹೊಸ ಕಾನೂನಿನ ರಕ್ಷಣೆಯಿಂದ ಆಕೆಯನ್ನು ಹೊರತು ಪಡಿಸಬಹುದು' ಎಂದು ಹೇಳುವ ಮೂಲಕ ಸುಪ್ರೀಂಕೋರ್ಟ್ ಈ ವಿಷಯಕ್ಕೆ ಸಂಬಂಧಿಸಿದ ಚರ್ಚೆಗೆ ಹೊಸ ದಾರಿಯನ್ನೂ ಸೂಚಿಸಿದೆ.

ಗಂಡು– ಹೆಣ್ಣಿನ ಸಂಬಂಧ ಇವತ್ತಿನ ಮುಕ್ತ ಸಮಾಜದಲ್ಲಿ ಸಂಕೀರ್ಣ ಸ್ವರೂಪಗಳನ್ನು ಪಡೆದುಕೊಂಡಿದೆ. ಅತ್ಯಾಚಾರ ಮತ್ತು ಪರಸ್ಪರ ಒಪ್ಪಿಗೆಯ ದೈಹಿಕ ಸಂಪರ್ಕದ ನಡುವಣ ಗೆರೆಯೂ ಹೆಚ್ಚು ತೆಳ್ಳಗಾಗಿದೆ. ಪುರುಷ ಪ್ರಧಾನ ಸಮಾಜದಲ್ಲಿ ಬಹಳಷ್ಟು ಸಲ ಕಾನೂನುಗಳೂ ಮಹಿಳೆಯ ವಿರುದ್ಧವಾಗಿಯೇ ವರ್ತಿಸುತ್ತವೆ. ಈ ಹಿನ್ನೆಲೆಯಲ್ಲಿ ಕಾನೂನುಗಳ ವಿಶ್ಲೇಷಣೆಯಲ್ಲಿ ನ್ಯಾಯಾಧೀಶರು ಹೆಚ್ಚು ಮಹಿಳಾಪರ ಇರಬೇಕು ಎಂದು ಬಯಸಿದರೆ ಅದು ತಪ್ಪಾಗುವುದಿಲ್ಲ. ಆದರೆ ವಿವಾಹಿತ ಪುರುಷನೊಬ್ಬನ ಜತೆ ಗೊತ್ತಿದ್ದೂ ಕೂಡಿಕೆ ಸಂಬಂಧಕ್ಕೆ ಒಳಗಾಗುವ ಅವಿವಾಹಿತ ಮಹಿಳೆ, ಅದೇ ವೇಳೆ ಆ ಪುರುಷನ ಪತ್ನಿಗೆ ತಾನು ಅನ್ಯಾಯ ಮಾಡುತ್ತಿದ್ದೇನೆಂಬ ಬಗ್ಗೆ ಆಲೋಚಿಸುವುದು ಬೇಡವೆ? ಮುಕ್ತ ಸಮಾಜದಲ್ಲಿ ಪ್ರೀತಿ, ದೈಹಿಕ ಬಯಕೆಗಳೆಲ್ಲವೂ ಇಂತಹ ಪ್ರಶ್ನೆಗಳಿಗೆ ಅತೀತವೆಂದು ತಿಳಿದುಕೊಳ್ಳುವುದು ಎಷ್ಟರ ಮಟ್ಟಿಗೆ ಸರಿ? ಪ್ರೀತಿ ಎನ್ನುವುದು ಜವಾಬ್ದಾರಿಯೂ ಹೌದು ಎನ್ನುವುದನ್ನು ಸುಪ್ರೀಂಕೋರ್ಟ್ ತೀರ್ಪು ಸೂಚ್ಯವಾಗಿ ಮನದಟ್ಟು ಮಾಡಿದೆ. ಈ ನಿಟ್ಟಿನಲ್ಲಿ ಹೊಸ ಕಾನೂನನ್ನು ರೂಪಿಸುವ ಮುನ್ನ ಇನ್ನಷ್ಟು ಚರ್ಚೆ ನಡೆಯುವ ಅಗತ್ಯವಿದೆ.

■ ಬಿ.ಎಂ.ಹನೀಫ್



ವಿಜಯಾ